STAR Q

# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 1095 |
| ಮಾನ್ಯ ಸದಸ್ಯರ ಹೆಸರು | ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 20.08.2025 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಭಾಷಾವಾರು ಪ್ರಾಂತ್ಯಗಳ ವಿಂಗಡಣೆಯಾಗಿ ಸುಮಾರು 68 ವರ್ಷಗಳು ಕಳೆದರೂ ಭೂದಾಖಲೆಗಳಿಗಾಗಿ ಇಂದಿಗೂ ತಮಿಳುನಾಡಿನ ಕಂದಾಯ ಕಛೇರಿಗಳಿಗೆ ಅಲೆಯಬೇಕಾದ ಅನಿವಾರ್ಯತೆ ಆನೇಕಲ್ ತಾಲ್ಲೂಕಿನ ಮರಸೂರು ಗ್ರಾಮ ಪಂಚಾಯಿತಿಯ 08 ಗ್ರಾಮಗಳಿಗೆ ತೊಂದರೆ ಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರವು ಯಾವ ಕ್ರಮ ಕೈಗೊಂಡಿದೆ; (ವಿವರ ನೀಡುವುದು) | ಬಂದಿದೆ.<br><br>ಆನೇಕಲ್ ತಾಲ್ಲೂಕಿನ ಮರಸೂರು, ಮಡಿವಾಳ, ಮರಸೂರು ಅಗ್ರಹಾರ. ಆದಿಸೊಣ್ಣಹಳ್ಳಿ, ಹಳೆವೂರು, ನಾಗನಾಯಕನಹಳ್ಳಿ, ಪಂಚಾಯತಿಗೆ ಸೇರಿದ 8 ಗ್ರಾಮಗಳಾಗಿದ್ದು, ಸದರಿ ಗ್ರಾಮಗಳ ಪೈಕಿ ಹಳೆವೂರು, ನಾಗನಾಯಕನಹಳ್ಳಿ ಗ್ರಾಮಗಳು ಮರಸೂರು ಗ್ರಾಮದ ಮಜರೆ ಗ್ರಾಮಗಳಾಗಿರುತ್ತವೆ ಹಾಗೂ ಆದಿಸೊಣ್ಣಹಟ್ಟಿ, ಬಂಡಾಪುರ ಹಾಗೂ ಶೆಟ್ಟಿಹಳ್ಳಿ ಗ್ರಾಮಗಳು ಮಡಿವಾಳ ಗ್ರಾಮದ ಮಜರೆ ಗ್ರಾಮಗಳಾಗಿರುತ್ತವೆ. ಮರಸೂರು ಅಗ್ರಹಾರ ಗ್ರಾಮದ ಎಲ್ಲಾ ಸರ್ವೆ ದಾಖಲೆಗಳು ಆನೇಕಲ್ ತಾಲ್ಲೂಕಿನಲ್ಲಿ ಲಭ್ಯವಿದ್ದು, ಮರಸೂರು ಮತ್ತು ಮಡಿವಾಳ ಗ್ರಾಮಗಳಲ್ಲಿ ಮೂಲ ಸರ್ವೆ ಮತ್ತು ಹಿಸ್ಸಾ ಸರ್ವೆ ದಾಖಲೆಗಳು ಲಭ್ಯವಿದ್ದು, ಆಕಾರಬಂದ್ ದಾಖಲೆ ಲಭ್ಯವಿರುವುದಿಲ್ಲ.<br><br>ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು ಮತ್ತು ಪ್ರಾದೇಶಿಕ ಭೂದಾಖಲೆಗಳ ಜಂಟಿ ನಿರ್ದೇಶಕರು, ಬೆಂಗಳೂರು ವಿಭಾಗರವರ ಸೂಚನೆಯಂತೆ ಆಕಾರಬಂದ್ ಪುನರ್ ನಿರ್ಮಾಣ ಮಾಡಲಾಗುತ್ತಿದ್ದು, ವಿವರ ಈ ಕೆಳಗಿನಂತಿರುತ್ತದೆ:- |

| ಗ್ರಾಮ | ಒಟ್ಟು ಸ.ನಂ.ಗಳು | ಪುನರ್ ನಿರ್ಮಾಣಗೊಂಡ ದಾಖಲೆಗಳ ವಿವರ | | ಪುನರ್ ನಿರ್ಮಾಣ ಪ್ರಗತಿಯಲ್ಲಿರುವ ಸ.ನಂ.ಗಳು |
|---|---|---|---|---|
| | | ಸ.ನಂ | ಹಿ.ನಂ | |
| ಮರಸೂರು | 557 | 348 | 1036 | 209 |
| ಮಡಿವಾಳ | 609 | 140 | 569 | 469 |
| **ಒಟ್ಟು** | **1166** | **488** | **1605** | **678** |

| | | |
|---|---|---|
| (ಆ) | 8 ಗ್ರಾಮದ ರೈತರು ಕಂದಾಯ ದಾಖಲೆ ಗಳಿಗಾಗಿ ಚೆನ್ನೈಗೆ ಹೋಗುತ್ತಿರುವುದು ಮತ್ತು ಜಮೀನು ಮಾರಾಟ, ಹಕ್ಕುಪತ್ರ ಸೇರಿ ಮತ್ತಿತರ ಸಂದರ್ಭ ಗಳಲ್ಲಿ ದಾಖಲೆಗಳು ಕರ್ನಾಟಕ ಸರ್ಕಾರದಿಂದ ಮಾನ್ಯಗೊಳ್ಳುತ್ತಿಲ್ಲವಾದ ಕಾರಣ, ಗ್ರಾಮಸ್ಥರಿಗೆ ತೊಂದರೆ ಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು; | ತಹಶೀಲ್ದಾರ್, ಆನೇಕಲ್ ತಾಲ್ಲೂಕುರವರ ವರದಿಯನ್ವಯ ಮರಸೂರು, ಮಡಿವಾಳ. ಮರಸೂರು ಅಗ್ರಹಾರ, ಆದಿಸೊಣ್ಣಹಟ್ಟಿ, ಹಳವೂರು, ನಾಗನಾಯಕನಹಳ್ಳಿ, ಬಂಡಾಪುರ. ಶೆಟ್ಟಿಹಳ್ಳಿ ಗ್ರಾಮಗಳು ಮರಸೂರು ಪಂಚಾಯತಿಗೆ ಸೇರಿದ 8 ಗ್ರಾಮಗಳಾಗಿದ್ದು, ಸದರಿ ಗ್ರಾಮಗಳಿಗೆ ಸಂಬಂಧಿಸಿದ ಮೂಲ ದಾಖಲೆಗಳು ಭಾಷಾವಾರು ಪ್ರಾಂತ್ಯ ವಿಂಗಡಣೆಯಾದ ಸಂಧರ್ಭದಲ್ಲಿ - ತಮಿಳುನಾಡು ಸರ್ಕಾರ ನೀಡಿರುವುದಿಲ್ಲ.<br><br>ಆದ್ದರಿಂದ, ತಮಿಳುನಾಡು ಸರ್ಕಾರದಿಂದ ಕಂದಾಯ ಇಲಾಖೆಯ ಮೂಲ ದಾಖಲೆಗಳನ್ನು ತರಿಸಿಕೊಂಡು ಸರ್ಕಾರದ ವಶಕ್ಕೆ ಪಡೆದು, ರೈತರು ಮತ್ತು ಬಡವರಿಗೆ ಅನುಕೂಲ ಮಾಡಿಕೊಡುವಂತೆ ಮರಸೂರು ಗ್ರಾಮ ಪಂಚಾಯಿತಿರವರು ಈ ಹಿಂದೆ ಕೋರಿರುವ ಮೇರೆಗೆ ದಿನಾಂಕ:16.09.2022 ರಂದು ತಹಶೀಲ್ದಾರ್, ಹೊಸೂರು ತಾಲ್ಲೂಕು ರವರಿಗೆ ಪತ್ರ ಬರೆಯಲಾಗಿರುತ್ತದೆ.<br><br>ಆದರೆ, ಇಲ್ಲಿಯವರೆಗೂ ಸದರಿಯವರಿಂದ ಯಾವುದೇ ರೀತಿಯ ಸಹಕಾರ ದೊರೆಯದ ಕಾರಣ ಮುಂದಿನ ದಿನಗಳಲ್ಲಿ ತಾಲ್ಲೂಕು ಕಛೇರಿಯ ಅಧಿಕಾರಿ/ನೌಕರರ ಪರಿಶೀಲನ ತಂಡ ರಚಿಸಿ, ಪರಿಶೀಲನಾ ವರದಿಯಂತೆ ಅಗತ್ಯ ಕ್ರಮ ವಹಿಸಲಾಗುತ್ತದೆ. |
| (ಇ) | ಸರ್ಕಾರವು ಇದನ್ನು ಗಂಭೀರವಾಗಿ ಪರಿಗಣಿಸಿ ಯಾವ ಕಾಲಮಿತಿಯೊಳಗೆ ಈ ತೊಂದರೆಯನ್ನು ಸರಿಪಡಿಸಿ, ಗ್ರಾಮಸ್ಥರಿಗೆ ನೆಮ್ಮದಿಯಿಂದ ಜೀವನ ಸಾಗಿಸಲು ಅನುಕೂಲ ಮಾಡಿಕೊಡುವುದು? (ಸಂಪೂರ್ಣ ವಿವರ ನೀಡುವುದು) | ದಶಕಗಳಿಂದ ಪುನರ್ ನಿರ್ಮಾಣ ಮಾಡಲು ಬಾಕಿ ಇದ್ದ 1166 ಸರ್ವೆ ನಂಬರುಗಳ ಆಕಾರಬಂದ್ ಪೈಕಿ 448 ಸರ್ವೆ ನಂಬರ್ (1605 ಹಿಸ್ಸಾ ನಂಬರ್) ಪುನರ್ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, ಬಾಕಿ 678 ಸರ್ವೆ ನಂಬರುಗಳನ್ನು 3 ತಿಂಗಳ ಒಳಗಾಗಿ ಪುನರ್ ನಿರ್ಮಾಣ ಮಾಡಲಾಗುವುದು. ಭಾಷಾವಾರು ಪ್ರಾಂತ್ಯ ವಿಂಗಡಣೆಯಾದ ಸಂಧರ್ಭದಲ್ಲಿ ಕಂದಾಯ ದಾಖಲೆಗಳು ಸಮರ್ಪಕವಾಗಿ ವರ್ಗಾವಣೆಯಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಕಂದಾಯ ಅಧಿಕಾರಿ/ನೌಕರರ ತಂಡ ರಚಿಸಿ, ಅತೀ ಶೀಘ್ರದಲ್ಲಿ ದಾಖಲೆಗಳನ್ನು ಪಡೆಯಲು ಅಗತ್ಯ ಕ್ರಮವಹಿಸಲಾಗುತ್ತದೆ. |

**ಸಂಖ್ಯೆ: ಕಂಇ 143 ಎಸ್ಎಸ್‌ಸಿ 2025**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು